MVC No. 98/2025

PW-1

**(ಇಂದು ದಿಃ 19-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**
**ಪಾಟೀ ಸವಾಲುಃ- 2 ನೇ ಎದುರುದಾರರ ಪರ ಶ್ರೀ.RSK ವಕೀಲರಿಂದಃ-**

ದಿನಾಂಕ 22.07.2024 ರಂದು ಬಂಕೂರನಿಂದ ಕಲಬುರಿಗೆ ಮೋಟರ್ ಸೈಕಲ ಮೇಲೆ ನಾನು ನನ್ನ ಮತ್ತು ಶ್ರಯೇಷ ಹೋಗುತ್ತಿದ್ದೇವು. ಮೋಟರ್ ಸೇೖಕಲ್ ನನಗೆ ಸೇರಿದ್ದು. ನಾನು ಮೋಟರ್ ಸೈಕಲ ಚಾಲನೆ ಮಾಡುತ್ತಿದ್ದೆ. ನನ್ನ ಬಳಿ ಡಿಎಲ್ ಇದೆ. ಅದನ್ನು ನ್ಯಾಯ ಾಕಯಕ್ಕೆ ಹಾಜರುಪಡಿಸುತ್ತೇನೆ. ನನ್ನ ಬಳಿ ಡಿಎಲ(್ ಇಲ್ಲದ ಕಾರಣ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ನಾಹಿವು ಮೋಟರ್ಸ ಸೈಕಲ ಮೇಲೆ ಹೊಗುತ್ತಿರುವಾಗ ಎದರುಗಡೆಯಿಂದ ಾಟ್ಯ್ಯಾಂಕರ್ ಲಾರಿ ವೇಗವಾಗಿ ಬಂದು ಏಕಾಏಕಿ ಟರ್ನ ಮಾಡಿದ್ದರಿಂದ ಮೋಟರ್ ಸೈಕಲ ಗೆ ಡಿಕ್ಕಿ ಪಡಿಸಿ ಅಪಘತ ಮಾಡಿದ್ದಾದರೆ. ಅಪಘಾತ ಆದ ರೆಸ್ತೆ ಎರಡು ವಾಹನ ಹೋಗವಷ್ಟು ಅಗಲ ಇದೆ ಎಂದರೆ ಸರಿ. ಐ ಓ ಸಿ ಬಳಿ ರಸ್ತೆ ಎರುಡ ಕಡೆ ರಸ್ತೆ ಹುಬ್ಬುಗಳು ಇವೆ ಎಂದರೆ ಸರಿಯಲ್ಲ. ಅಲಲ್ಲಿ ಸಾಕಷ್ಟು ವಾಹನ ಸಂಚಾರ ಇದೆ ಎಂದರೆ ಸರಿ. ಹಂಪ್ಸ ಇರುವ ಕಾರಣ ಎಲ್ಲಾ ವಾಹನಗಳು ನಿಧಾನವಾಗಿ ಚಲಿಸುತ್ತವೆ ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದ ಆಗಿದೆ, ಟ್ಯಾಂಕರ್ ಲಾರಿ ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ.

ನಾನು ಸರಕಾರಿ ಪ್ರಾಥಮಿಕ ಶಾಲೆ ಶಿಕ್ಷಕನಾಗಿದ್ದು CRP ಎಂದು ಕೆಲಸ ಮಾಡುತ್ತೇನೆ. ನನ್ನ ವೇತನ ಪ್ರಮಾಣ ಪತ್ರ ಹಾಜರುಪಡಿಸಿಲ್ಲ. ನನಗೆ ತಿಂಗಳಿಗೆ 60,000/- ಸಂಬಳ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾದ ಆದಾಗ ನನಗೆ 39 ವರ್ಷ ವಯಸ್ಸು ನನ್ನ ಜನ್ಮ ದಿನಾಂಕ 01.04.1986. ನನ್ನ ಆಧಾರ ಕಾರ್ಡ ಹಾಜರುಪಡಿಸಿದ್ದೇನೆ. ನಾನು ರಜೆ ದಿನಗಳಲ್ಲಿ ವ್ಯವಾಸಾಯ ಮಾಡುತ್ತೇನೆ. ನನಗೆ ಜಮೀನು ಇದೆ. ನಾನು ಕಲಬುರಗಿಯು ಮನ್ನೂರು ಆಸ್ಪತ್ರೆಯಲ್ಲಿ 7-8 ದಿನ ಒಳ ರೋಗಿಯಾಗಿದ್ದೆ. ಆ ಸಮಯದಲ್ಲಿ HPL ರಜೆ ಹಾಕಿದ್ದೆ. ಅಪಘಾತ ದ ನಂತರ 20 ದಿನ ಕರ್ತವ್ಯಕ್ಕೆ ಹೋಗಿಲ್ಲ. 20 ದಿನ HPL ರಜೆ ಹಾಕಿದ್ದೆ. 20 ದಿನದ ಅರ್ದ ಸಂಬಳ ಬಂದಿದೆ. ನಾನು 20 ದಿನ HPL ರಜೆ ಹಾಕಿದ್ದೆ ಮತ್ತು 20 ದಿನ ಅರ್ದ ಸಂಬಳ ಬಂದಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವೈದಕೀಯ ಬಿಲ್ಲನ್ನು ನನ್ನ ಇಲಾಖೆಯಿಂದ ಮರುಪಾವತಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ವೈದ್ಯಕೀಯ ಬಿಲ್ಲುಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ

ಸರಿಯಲ್ಲ, ನಾನು ಒಂದೆ ಬಿಲ್ ಹಣಕ್ಕೆ ಎರಡೇರಡು ಬಿಲ್ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ,

ನನಗೆ ಯಾವುದೇ ಅಂಗ ನ್ಯೂನ್ಯತೆ ಉಂಟಾಗಿಲ್ಲ ಎಂದರೆ ಸರಿಯಲಲ. ನನಗೆ ಸರ್ಜರಿ ಮಾಡಿ ಪರಿಕರ ಅಳವಡಿಸಿದ್ದಾರೆ . ಪರಿಕರ ತೆಗೆಯಲು ಮತ್ತೆ ಸರ್ಜರಿ ಮಾಡಬೇಕಾಗಿದೆ. ಅದಕ್ಕೆ 60,000/- ಖರ್ಚಾಗುತ್ತದೆ. ಮೇಲಿನ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ, 60,000/- ಖರ್ಚಾಗುತ್ತದೆ ಎಂದು ವೈದ್ಯರಿಂದ ಪ್ರಮಾಣ ಪತ್ರ ಸಲ್ಲಿಸಿಲ್ಲ, ನಾನು ಮೊದಲಿನಂತೆ ಕೆಲಸ ಮಡುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ಅಪಘಾತ ಆಗಿ 20 ದಿನ ಗಳ ನಂತರ ಶಿಕ್ಷಕ ಕರ್ತವ್ಯಕ್ಕೆ ಹಾಜರಾಗಿ ಮೊದಲಿನಂತೆ ಸಂಬಳ ಪಡೆದುಕೊಳ್ಳುತ್ತಿದ್ದೇನೆ ಎಂದರೆ ಸರಿ . ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**